**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ**

**ಇವರ ನ್ಯಾಯಾಲಯದಲ್ಲಿ**

**ಎಸ್.ಸಿ.ನಂ. 2/2020**

ಅ. ಸಾ. **01**

ಚಾ. ಸಾ. 01

| | |
|---|---|
| ಸಾಕ್ಷಿದಾರರ ಹೆಸರು | : ರೂಪದರ್ಶಿ ಕಿಣಗಿ |
| ಗಂಡನ ಹೆಸರು | : ಸಂಗನಬಸಪ್ಪ |
| ವಯಸ್ಸು | : 49 ವರ್ಷಗಳು |
| ಉದ್ಯೋಗ | : ಗೃಹಣಿ |
| ವಾಸಸ್ಥಳ | : ಬೆಂಗಳೂರು. |

ದಿನಾಂಕಃ **17.03.2022** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.2 ಅವರು ನನ್ನ ತಾಯಿ. ಚಾಸಾ.4 ನನ್ನ ಮಗ, ಮೃತ ಎಮ್.ಎಮ್. ಕಲಬುರ್ಗಿ ನನ್ನ ತಂದೆ. ಚಾಸಾ.6 ಮತ್ತು ಚಾಸಾ.8 ನನ್ನ ನೆರೆ ಮನೆಯ ವ್ಯಕ್ತಿ, ಚಾಸಾ. 9 ರ ಅಂಗಡಿ ನಮ್ಮ ಮನೆಯ ಎದುರುಗಡೆ ಇದೆ.

**02.** ದಿನಾಂಕಃ 30.08.2015 ರಂದು ಬೆ.8.40 ರಿಂದ 8.45 ರ ಸಮಯದಲ್ಲಿ ನಮ್ಮ ಮನೆಯಲ್ಲಿ ಘಟನೆ ನಡೆದಿರುತ್ತದೆ. ನಾನು

ದಿನಾಂಕಃ 25.08.2015 ರಂದು ನನ್ನ ತಂದೆಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಇದ್ದು ಆ ಕಾರಣ ನಾನು ದಿಲ್ಲಿಯಿಂದ ಬೆಂಗಳೂರಿಗೆ ಬಂದು ಧಾರವಾಡಕ್ಕೆ ಬಂದಿದ್ದೆ. ನನ್ನ ಗಂಡ ಭಾರತದ ನೌಕಾಪಡೆಯಲ್ಲಿ ಕಮಡೋ ಆಗಿದ್ದರು. ಮನೆಯಲ್ಲಿ ನಾನು, ನನ್ನ ತಾಯಿ ಹಾಗೂ ನನ್ನ ಮಗ ಚಾಸಾ.4 ಇದ್ದೆವು. ಮೇಲೆ ಹೇಳಿದ ದಿನಾಂಕದಂದು ನನ್ನ ತಂದೆ ಬೆಳಿಗ್ಗೆ ಟೀ ಕುಡಿದು ನಂತರ ಬೆ.8.40 ರಿಂದ 8.45 ರ ಸಮಯದಲ್ಲಿ ಫೋನ್‌ನಲ್ಲಿ ಮಾತನಾಡಿಕೊಂಡು ಹಾಲ್‌ನಲ್ಲಿ ಅಡ್ಡಾಡುತ್ತಿದ್ದರು. ಆಗ ಯಾರೋ ಬಾಗಿಲು ಬಡಿದರು, ನನ್ನ ತಂದೆ ಬಾಗಿಲು ತೆಗೆದರು. ಬಾಗಿಲು ತೆಗೆದ ನಂತರವೂ ಸಹ ಅವರು ಫೋನ್‌ನಲ್ಲಿ ಮಾತನಾಡುತ್ತಿದ್ದರು. ಆಗ ನನ್ನ ತಾಯಿ ಬಾಗಿಲಿನ ಬಳಿ ಹೋಗಿ ಅಲ್ಲಿ ನಿಂತದ್ದ ವ್ಯಕ್ತಿಗೆ ಯಾರು ಬೇಕು ಎಂದು ಕೇಳಿದರು. ಆತ ಸರ್ ಬೇಕು ಎಂದು ಹೇಳಿದ, ಆಗ ನನ್ನ ತಾಯಿ ನನ್ನ ತಂದೆಗೆ ಯಾರೋ ಬಂದಿದ್ದಾರೆ ಎಂದು ಸನ್ನೆ ಮಾಡಿ ಒಳಕ್ಕೆ ಹೋದರು. ಅವರು ಒಳಗೆ ಬರುವಷ್ಟರಲ್ಲಿಯೇ ಟಪ್ ಟಪ್ ಎಂದು ಶಬ್ದ ಕೇಳಿಸಿತು. ತಕ್ಷಣ ನಾನು ಮತ್ತು ನನ್ನ ತಾಯಿ ಹಾಲ್‌ಗೆ ಓಡಿ ಬಂದಿದ್ದು ಆಗ ನನ್ನ ತಂದೆ ಕೆಳಕ್ಕೆ ಬಿದ್ದಿದ್ದರು. ನಾವು ಯಾರು ಏನು ಎಂದು ಹೊರಗೆ ಬಗ್ಗಿ ನೋಡುವಷ್ಟರಲ್ಲಿ ಮನೆಗೆ ಬಂದಿದ್ದಂತಹ ವ್ಯಕ್ತಿ ಬಗಲಿನ ಮೇಲೆ ಚೀಲ ಹಾಕಿಕೊಂಡಿದ್ದು ಹೊರಗೆ ಬೈಕ್ ಚಾಲನೆಯಲ್ಲಿಟ್ಟಿದಂತಹ ವ್ಯಕ್ತಿಯ ಬೈಕ್ ಅನ್ನು ಹತ್ತಿ ಹೋದರು. ನಾನು ಬನ್ನಿ ಬನ್ನಿ ಎಂದು ಕೂಗಾಡುತ್ತಿದಂತೆ ಅಕ್ಕಪಕ್ಕದ ಮನೆಯವರಾದ ಚಾಸಾ.6 ತೋಡ್ಕರ, ಚಾಸಾ.8 ತಿಗಡಿ, ಚಾಸಾ.13 ಫೀರಪಾಷಾ ಹಾಗೂ ಚಾಸಾ.6 ಮತ್ತು 8 ರ ಮನೆಯ ಸದಸ್ಯರು ಸ್ಥಳಕ್ಕೆ ಬಂದರು. ಅವರು ನನ್ನ ತಂದೆಯನ್ನು ಮ್ಯಾಟ ಮೇಲೆ ಮಲಗಿಸಿದರು. ನನ್ನ ತಂದೆಗೆ ಪ್ರಜ್ಞೆ ಇರಲಿಲ್ಲ. ಹಣೆಯ ಮಧ್ಯಭಾಗದಲ್ಲಿ ತೂತು ಬಿದ್ದಿದ್ದು, ರಕ್ತ ಬರುತ್ತಿತ್ತು, ಕಿವಿಯ ಹಿಂಭಾಗದಲ್ಲಿಯೂ ಸಹ ರಕ್ತ ಬರುತ್ತಿತ್ತು. ಚಾಸಾ.8 ಅವರು ತಮ್ಮ 4 ಚಕ್ರದ ಸ್ಕಾರ್ಪಿಯೋ ವಾಹನ ತಂದು ನನ್ನ ತಂದೆಯನ್ನು ಸ್ಪಂದನ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅವರ ಹಿಂದೆಯೇ ನಾನು ಮತ್ತು ನನ್ನ ತಾಯಿ ಕಣವಿಯವರ 4 ಚಕ್ರದ ವಾಹನದಲ್ಲಿ ಹೋದೆವು. ನಾವು ಸ್ಪಂದನ ಆಸ್ಪತ್ರೆಗೆ ಹೋದಾಗ ಅವರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿ ತಮ್ಮ ಆ್ಯಂಬುಲೆನ್ಸ ನಲ್ಲಿ ಕಳಿಸಿಕೊಟ್ಟರು. ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರು ನನ್ನ ತಂದೆ ಜೀವಂತ ಇಲ್ಲಾ ಎಂದು ತಿಳಿಸಿದರು.

ಆಗ ನಾನು ಜಿಲ್ಲಾ ಆಸ್ಪತ್ರೆಯಲ್ಲೇ ಅಲ್ಲಿದ್ದಂತಹ ಪೊಲೀಸ್ ಅವಟ್‌ಪೋಸ್ಟನಲ್ಲಿ ನನ್ನ ಕೈ ಬರವಣಿಗೆಯ ದೂರು ಕೊಟ್ಟೆ. ಸದರಿ ದೂರಿನಲ್ಲಿ ಕೃತ್ಯ ಎಸಗಿದಂತಹ ವ್ಯಕ್ತಿಗಳನ್ನು ನೋಡಿದರೆ ನಾವು ಗುರುತಿಸಬಲ್ಲೆವು ಎಂದು ಹೇಳಿಕೊಂಡಿರುತ್ತೇನೆ. ನಾನು ಕೊಟ್ಟಂತಹ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.1 ಹಾಗೂ ಸಾಕ್ಷಿ ಗುರುತಿಸಿರುವಂತಹ ತನ್ನ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ನನ್ನ ತಂದೆಯನ್ನು ಮ್ಯಾಟ್ ಮೇಲೆ ಮಲಗಿಸಿದ್ದಾಗ ಕಾಟರೇಜ್ ಬಿದ್ದಿರುವುದು ಕಂಡು ಬಂತು. ಅಂದು ಮನೆಗೆ ಬಂದತಹ ವ್ಯಕ್ತಿ ಕಪ್ಪು ಬಣ್ಣದ ಬಟ್ಟೆ ಧರಿಸಿದ್ದ. ನಾನು ದೂರು ಕೊಟ್ಟ ನಂತರ ವಿದ್ಯಾಗಿರಿ ಪೊಲೀಸ್ ಠಾಣೆಗೆ ಬಂದು ಅಲ್ಲಿಯೂ ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ಪ್ರ. ವರ್ತಮಾನ ಮಾಹಿತಿಯಲ್ಲಿರುವಂತಹ ತನ್ನ ಸಹಿಯನ್ನು ನೋಡಿ ಗುರುತಿಸಿರುವ ಕಾರಣ ಸದರಿ ಪ್ರ.ವರ್ತಮಾನ ವರದಿಯನ್ನು ನಿಪಿ.2 ಹಾಗೂ ಸಾಕ್ಷಿ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ನಂತರ ನಾನು ಮನೆಗೆ ಬಂದೆ.

**03**. ಪೊಲೀಸರು ಸಂಜೆ 4.00 ಗಂಟೆ ಸಮಯದಲ್ಲಿ ಪಂಚನಾಮೆ ಮಾಡುವ ಸಲುವಾಗಿ ಮನೆಗೆ ಬಂದಿರುತ್ತಾರೆ. ಪಂಚನಾಮೆ ಸಮಯದಲ್ಲಿ ನಾನು ಸ್ಥಳವನ್ನು ಗುರುತಿಸಿರುತ್ತೇನೆ. ಸ್ಥಳದಲ್ಲಿ ಪೊಲೀಸರು ಅಲ್ಲಿ ಬಿದ್ದಿದ್ದ ಕಾಟರೇಜ್, ಮ್ಯಾಟ್, ಕಾರಪೆಟ್ ಹಾಗೂ ಬಟ್ಟೆಯ ತುಂಡುಗಳನ್ನು, ಮೊಬೈಲ್ ಪೋನ್ ವಶಪಡಿಸಿಕೊಂಡರು. ನ್ಯಾಯಾಲಯದ ಮುಂದೆ ಇರುವಂತಹ ಪ್ಯಾಕ್ ಮಾಡಿದಂತಹ ಒಂದು ದೊಡ್ಡ ಪೊಟ್ಟಣವನ್ನು ತೆರೆದು ನೋಡಲು ಅನುಮತಿ ನೀಡಿದ್ದು, ಸದರಿ ಪೊಟ್ಟಣದಲ್ಲಿರುವಂತಹ ಕಾರಪೆಟ್ ಮ್ಯಾಟ್ ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪ್ಯಾಕ್ ಮಾಡಿರುವಂತಹ ಇನ್ನೊಂದು ಪೊಟ್ಟಣವನ್ನು ತೆರೆದು ನೋಡಲು ಅನುಮತಿ ನೀಡಿದ್ದು, ಸದರಿ ಪೊಟ್ಟಣದಲ್ಲಿರುವಂತಹ ಹರಿದ ಮ್ಯಾಟ್‌ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪ್ಯಾಕ್ ಮಾಡಿರುವಂತಹ ಇನ್ನೊಂದು ಪೊಟ್ಟಣವನ್ನು ತೆರೆದು ನೋಡಲು ಅನುಮತಿ ನೀಡಿದ್ದು, ಸದರಿ ಪೊಟ್ಟಣದಲ್ಲಿರುವಂತಹ ಹರಿದ ಟವಲ್ ತುಂಡನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ವಸ್ತುಗಳನ್ನು ಮು.ಮಾ.1 ರಿಂದ 3 ಎಂದು ಕ್ರಮವಾಗಿ

ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವಂತಹ ಎರಡು ಫೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿ, ಸದರಿ ಫೋಟೋವನ್ನು ಸ್ಥಳ ಪಂಚನಾಮೆ ಸಮಯದಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.3 ಮತ್ತು ನಿಪಿ.4 ಎಂದು ಗುರುತಿಸಲಾಯಿತು. ಮೊಹರು ಮಾಡಿದಂತಹ ಪೊಟ್ಟಣವನ್ನು ಒಡೆದು ನೋಡಲಾಗಿ ಅದರಲ್ಲಿದ್ದಂತಹ ಕಾಡತೋಸ್ (ಕಾಟರೇಜ್) ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.4 ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಮೂರು ಸಣ್ಣ, ಸಣ್ಣ ಕಾಡತೋಸ್‌ಗಳು ಇದ್ದವು. ಮೊಹರು ಮಾಡಿದಂತಹ ಇನ್ನೆರಡು ಪೊಟ್ಟಣಗಳನ್ನು ಒಡೆದು ನೋಡಲಾಗಿ ಅದರಲ್ಲಿದ್ದಂತಹ ಖಾಲಿ ಕಾಡತೋಸ್ (ಕಾಟರೇಜ್) ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.5 ಮತ್ತು ಮು.ಮಾ.6 ಎಂದು ಗುರುತಿಸಲಾಯಿತು.

**04.** ನನ್ನ ತಂದೆ ಹಂಪಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನಿವೃತ್ತಿ ಹೊಂದಿದ್ದರು. ಅದಲ್ಲದೇ ಅವರು ಸಾಹಿತಿ ಮತ್ತು ಸಂಶೋಧಕರಾಗಿದ್ದರು. ಅದಲ್ಲದೇ ಅವರು ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ, ಚಂದಸ್ಸು ಹಾಗೂ ಕನ್ನಡದ ಎಲ್ಲಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕನ್ನಡ ಸಾಹಿತ್ಯಕ್ಕಾಗಿ ಶ್ರಮಿಸಿದ್ದರು. ನನ್ನ ತಂದೆಗೆ ಹಲವಾರು ಪ್ರಶಸ್ತಿಗಳು ಬಂದಿದ್ದು ಅವುಗಳಲ್ಲಿ ಕೆಲವು ಪಂಪ ಪ್ರಶಸ್ತಿ, ರನ್ನ ಪ್ರಶಸ್ತಿ, ಬಸವ ಪ್ರಶಸ್ತಿ, ಕೇಂದ್ರ ಸಾಹಿತಿ ಅಕಾಡೆಮಿ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಹೀಗೆ ಹಲವಾರು ಪ್ರಶಸ್ತಿಗಳು ಬಂದಿವೆ.

(**ಈ ಹಂತದಲ್ಲಿ ಮಧ್ಯಾಹ್ನದ ವಿಶ್ರಾಂತಿ ವೇಳೆ ಆಗಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಕಾಯ್ದಿರಿಸಲಾಯಿತು**).

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಪಂಚಾಕ್ಷರಿ ಎಂ.)**
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.

**ಸಾಕ್ಷಿಯನ್ನು ಮಧ್ಯಾಹ್ನದ ವಿಶ್ರಾಂತಿ ನಂತರ ಪುನಃ ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

**05.** 2014 ರಲ್ಲಿ ಮೂಢನಿಂಬಿಕೆಯ ವಿರುದ್ಧ ವಿಚಾರ ಸಂಕಿರ್ಣ ಇದ್ದು ಅದಕ್ಕಾಗಿ ನನ್ನ ತಂದೆಯನ್ನು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕರೆಸಿದ್ದರು. ಸದರಿ ಕಾರ್ಯಕ್ರಮದಲ್ಲಿ ನನ್ನ ತಂದೆ ಯು.ಆರ್.ಅನಂತಮೂರ್ತಿಯವರು ಹೇಳಿದಂತಹ ಒಂದು ವಾಕ್ಯವನ್ನು ಉಲ್ಲೇಖಮಾಡಿದ್ದರು. ಅವರು ಹೇಳಿದಂತಹ ವಾಕ್ಯ ನಿಖರವಾಗಿ ನನಗೆ ಗೊತ್ತಿಲ್ಲ ಆದರೆ ಅದರ ತಾತ್ಪರ್ಯ ದೇವರ ಹೆಸರನಲ್ಲಿ ಶೋಷಣೆಯಾಗಬಾರದು ಎಂಬ ಅರ್ಥದಲ್ಲಿ ಇತ್ತು. ಅದನ್ನು ತಪ್ಪಾಗಿ ಅರ್ಥೈಸಿಕೊಂಡು ಸದರಿ ಉಲ್ಲೇಖವನ್ನು ನನ್ನ ತಂದೆಯ ಸ್ವಂತ ವಾಕ್ಯ ಅಂದುಕೊಂಡು ಅದನ್ನು ಪತ್ರಿಕೆಯಲ್ಲಿ ಪ್ರಚಾರಿಸಿ ಬಿಟ್ಟರು. ಅದಾದ ನಂತರ ನನ್ನ ತಂದೆ ನಾನು ಉದ್ದೇಶಪೂರ್ವಕವಾಗಿ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ನಾನು ಕ್ಷಮೆ ಯಾಚಿಸುತ್ತೇನೆ ಎಂದು ಹೇಳಿಕೊಂಡಿದ್ದರು. ಆದಾದ ನಂತರ ಒಂದು ಕಾಗದದಲ್ಲಿ ಬರವಣಿಗೆ ಮಾಡಿ ಅದನ್ನು ಬಾಟಲಿ ಒಳಗೆ ತುಂಬಿ ನಮ್ಮ ಕಂಪೌಂಡನಲ್ಲಿ ಎಸೆದಿದ್ದರು. ಸದರಿ ಕಾಗದದ ಬರವಣಿಗೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಕಡತದಲ್ಲಿರುವಂತಹ ಒಂದು ಬರವಣಿಗೆಯ ಕಾಗದವನ್ನು ನೋಡಿ ಗುರುತಿಸಿ ಇದೇ ಕಾಗದವಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ದಾಖಲಾತಿಯನ್ನು ನಿಪಿ.5 ಎಂದು ಗುರುತಿಸಲಾಯಿತು. ಘಟನೆಯಾದ ದಿನದಂದು ನನ್ನ ತಂದೆ ಧರಿಸಿದಂತಹ ಬಟ್ಟೆಯನ್ನು ನೋಡಿದರೆ ಗುರುತಿಸಬಲ್ಲೆ. ಮೊಹರು ಮಾಡಿದಂತಹ ಒಂದು ಪೊಟ್ಟಣವನ್ನು ತೆರೆದ ನ್ಯಾಯಾಲದಲ್ಲಿ ಒಡೆದು ನೋಡಲಾಗಿ ಅದರಲ್ಲಿರುವ ನೀಲಿ ಬಣ್ಣದ ಶರ್ಟಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.7 ಎಂದು ಗುರುತಿಸಲಾಯಿತು. ಮೊಹರು ಮಾಡಿದಂತಹ ಇನ್ನೊಂದು ಪೊಟ್ಟಣವನ್ನು ತೆರೆದ ನ್ಯಾಯಾಲದಲ್ಲಿ ಒಡೆದು ನೋಡಲಾಗಿ ಅದರಲ್ಲಿರುವ ಬಿಳಿ ಬಣ್ಣದ ಪೈಜಾಮ ವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.8 ಎಂದು

ಗುರುತಿಸಲಾಯಿತು. ಇನ್ನೊಂದು ಪೊಟ್ಟಣದಲ್ಲಿರುವಂತಹ ಬಟ್ಟೆಯನ್ನು ನೋಡಿ ಸಾಕ್ಷಿ ಅದು ತನ್ನ ತಂದೆಯ ಸ್ವೆಟರ್ ಎಂದು ಗುರುತಿಸಿದ್ದು, ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು. ಮೊಹರು ಮಾಡಿದಂತಹ ಇನ್ನು ನಾಲ್ಕು ಪೊಟ್ಟಣಗಳನ್ನು ತೆರೆದ ನ್ಯಾಯಾಲದಲ್ಲಿ ಒಡೆದು ನೋಡಲಾಗಿ ಅದರಲ್ಲಿ ಒಂದು ಪೊಟ್ಟಣದಲ್ಲಿ ಒಳ ಉಡುಪು (ಕಾಚ), ಇನ್ನೊಂದು ಪೊಟ್ಟಣದಲ್ಲಿ ಬನಿಯಾನ, ಮತ್ತೊಂದು ಪೊಟ್ಟಣದಲ್ಲಿ ಟವಲ್ ಹಾಗೂ ಇನ್ನೊಂದು ಪೊಟ್ಟಣದಲ್ಲಿ ದಾರದ ಸಮೇತ ಗುಂಡಗಡಗಿಯನ್ನು  ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.10 ರಿಂದ ಮು.ಮಾ.13 ಎಂದು ಕ್ರಮವಾಗಿ ಗುರುತಿಸಲಾಯಿತು.

**06.** ಕಡತದಲ್ಲಿರುವಂತಹ 10 ಫೋಟೋಗಳನ್ನು ಸಾಕ್ಷಿ ನೋಡಿ ಸದರಿ ಫೋಟೋದಲ್ಲಿ ಕಂಡು ಬರುವಂತಹ ವ್ಯಕ್ತಿ ತನ್ನ ತಂದೆ ಎಂದು ಗುರುತಿಸಿರುತ್ತಾರೆ. ಫೋಟೋಗಳನ್ನು ನಿಪಿ.6 ರಿಂದ 15 ಎಂದು ಗುರುತಿಸಲಾಯಿತು. ದೂರು ಕೊಟ್ಟ ನಂತರ ಪೊಲೀಸರು ನನ್ನ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವಂತಹ ಇಂದು ಹಾಜರಿರುವಂತಹ ಹಸಿರು ಬಣ್ಣದ ಶರ್ಟಧರಿಸಿರುವಂತಹ ವ್ಯಕ್ತಿಯನ್ನು ತೋರಿಸಿ ಆತನೇ ನಮ್ಮ ಮನೆಗೆ ಬಂದು ನಮ್ಮ ತಂದೆಗೆ ಗುಂಡು ಹೊಡೆದಂತಹ ವ್ಯಕ್ತಿ ಎಂದು ಗುರುತಿಸಿರುತ್ತಾರೆ. ನ್ಯಾಯಾಲಯವು ಆತನ ಹೆಸರು ಕೇಳಲಾಗಿ ಆತ ತನ್ನ ಹೆಸರು ಗಣೇಶ ಮಿಸ್ಕಿನ್ ಎಂದು ಹೇಳಿ ಗುರುತಿಸಿಕೊಂಡಿರುತ್ತಾರೆ. ಅಂದು ಮೋಟಾರ್ ಸೈಕಲ್ ನಲ್ಲಿ ಹೊರಗೆ ಕಾಯುತ್ತಿದ್ದಂತಹ ವ್ಯಕ್ತಿಯನ್ನು ಸಹ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವಂತಹ ಆರೋಪಿಗಳಲ್ಲಿ ಇಂದು ಚೌಕಳಿ ಶರ್ಟ ಧರಿಸಿರುವಂತಹ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು, ನ್ಯಾಯಾಲಯವು ಅವನ ಹೆಸರು ಕೇಳಲಾಗಿ ಪ್ರವೀಣ ಪ್ರಕಾಶ ಚತುರ ಎಂದು ಗುರುತಿಸಿಕೊಂಡಿರುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ಆರೋಪಿಗಳನ್ನು ಗುರುತಿಸಿ ಭಾವುಕರಾಗಿ ಅತ್ತಿದ್ದು, ಅದನ್ನು ನ್ಯಾಯಾಲಯವು ಗಮನಿಸುವಂತೆ ವಿಶೇಷ ಸರ್ಕಾರಿ ಅಭಿಯೋಜಕರು**

**ವಿನಂತಿಸಿಕೊಂಡಿರುತ್ತಾರೆ.**

**<u>ಪಾಟೀ ಸವಾಲು</u>** :

**ಈ ಹಂತದಲ್ಲಿ ಆರೋಪಿತರ ಪರ ವಕೀಲರು ಸಿ.ಆರ್.ಪಿ.ಸಿ. ಕಲಂ231(2) ಅಡಿಯಲ್ಲಿ ಅರ್ಜಿ ಸಲ್ಲಿಸಿ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸದರಿ ಅರ್ಜಿಗೆ ವಿಶೇಷ ಸರ್ಕಾರಿ ಅಭಿಯೋಜಕರು ಆಕ್ಷೇಪಣೆಗಾರಿ ಸಮಯವಕಾಶ ಕೋರಿದ್ದು ಆ ಕಾರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮುಖೇನ ಬೆರಳಚ್ಚುಗಾರರಿಗೆ ಹೇಳಿ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಪಂಚಾಕ್ಷರಿ ಎಂ.)**
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.